

بِسۡمِ اللّٰہِ الرَّحۡمٰنِ الرَّحِیۡم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 03–05–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬರಲ್ಲಿ ಪ್ರಥಮ ಹೆಸರು ಹಝ್ರತ್ ಉಬೈದ್ ಬಿನ್ ಅಬೂ ಉಬೈದ್ ಅನ್‌ಸಾರಿ(ರ) ಅವರದಾಗಿದೆ. ಅವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು.

ಎರಡನೆಯ ಸಹಾಬಿಯ ಹೆಸರು ಹಝ್ರತ್ ಅಬ್ದುಲ್ಲಾ ಬಿನ್ ನುಅ್‌ಮಾನ್ ಬಿನ್ ಬಲ್‌ದಮ(ರ). ಅವರ ಅಜ್ಜನ ಹೆಸರು ಬಲ್‌ದಮ ಎಂದೂ ಬಲ್‌ಝುಮ ಎಂದೂ ಹೇಳಲಾಗಿದೆ. ಅನ್‌ಸಾರ್‌ಗೆ ಸೇರಿದವರಾಗಿದ್ದ ಹಝ್ರತ್ ಅಬ್ದುಲ್ಲಾ ಬಿನ್ ನುಅ್‌ಮಾನ್ ಹಝ್ರತ್ ಅಬೂ ಖತಾದರ ಚಿಕ್ಕಪ್ಪನ ಪುತ್ರನಾಗಿದ್ದರು. ಅವರು ಬದರ್, ಉಹುದ್, ಯುದ್ಧಗಳಲ್ಲಿ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಉಮೈರ್(ರ). ಅವರು ಬನೂ ಜದಾರ ಗೋತ್ರದವರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಇನ್ನೊಬ್ಬ ಬದರಿ ಸಹಾಬಿ ಹಝ್ರತ್ ಅಮರ್ ಬಿನ್ ಹಾರಿಸ್(ರ). ಅವರು ಬನೂ ಹಾರಿಸ್ ಗೋತ್ರದವರಾಗಿದ್ದರು. ಅವರು ಮಕ್ಕದಲ್ಲಿಯೇ ಮುಸ್ಲಿಮರಾದರು. ಅವರು ಅಬಿಸೀನಿಯಾ ದೇಶಕ್ಕೆ ಹೋದ ದ್ವಿತೀಯ ಗುಂಪಿನಲ್ಲಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಕಅಬ್(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಬದರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಯುದ್ಧದಲ್ಲಿ ಶತ್ರುಗಳಿಂದ ದೊರೆತ ಸ್ವತ್ತುಗಳ ಮೇಲ್ವಿಚಾರಕರನ್ನಾಗಿ ನೇಮಿಸಿದರಲ್ಲದೆ ಬೇರೆ ಯುದ್ಧಗಳ ಸಂದರ್ಭದಲ್ಲಿಯೂ ಶತ್ರುಗಳಿಂದ ವಶಪಡಿಸಿದ ಸ್ವತ್ತುಗಳ ಐದನೆ ಒಂದು ಪಾಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೇರಿದುವಾಗಿದ್ದು ಅದರ ಮೇಲ್ವಿಚಾರಕರಾಗಿಯೂ ಅವರು ನೇಮಿಸಲ್ಪಟ್ಟಿದ್ದರು. ಅವರು ಬದರ್ ಮಾತ್ರವಲ್ಲ ಉಹುದ್, ಖಂದಕ್ ಮೊದಲಾದ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ಹಿಜರಿ 33ರಲ್ಲಿ ಅವರು ಮದೀನದಲ್ಲಿ ನಿಧನ ಹೊಂದಿದರು. ಅವರ ಜನಾಝ ನಮಾಝ್ ಹಝ್ರತ್ ಉಸ್ಮಾನ್(ರ) ನಿರ್ವಹಿಸಿದರು. ಹಝ್ರತ್ ಅಬ್ದುಲ್ಲಾ ಬಿನ್ ಕಅಬರ ಉಪನಾಮಗಳು ಅಬೂ ಹಾರಿಸ್ ಎಂದೂ ಅಬೂ ಯಹ್‌ಯಾ ಎಂದೂ ವರದಿಯಾಗಿದೆ.

ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಖೈಸ್(ರ). ಅವರು ಬನೂ ನಜ್ಜಾರ್ ಗೋತ್ರದವರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಒಂದು ವರದಿ ಪ್ರಕಾರ ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಆದರೆ ಇನ್ನೊಂದು ವರದಿ ಪ್ರಕಾರ ಉಹುದ್ ಯುದ್ಧದಲ್ಲಿ ಶಹೀದರಾಗದೆ ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿ ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಚರಿತ್ರೆಯ ಗ್ರಂಥಗಳಲ್ಲಿ ಕೆಲವು ಭಿನ್ನಾಭಿಪ್ರಾಯಗಳಿರುತ್ತವೆ. ಆದುದರಿಂದ ಅವುಗಳನ್ನು ನಾನು ವಿವರಿಸುತ್ತಿದ್ದೇನೆ.

ಇನ್ನೊಬ್ಬ ಸಹಾಬಿ ಹಝ್ರತ್ ಸಲಿಮ ಬಿನ್ ಅಸ್‌ಲಮ್(ರ). ಅವರು ಬದರ್, ಉಹುದ್, ಖಂದಕ್, ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಬದರ್ ಯುದ್ಧದಲ್ಲಿ ಸಾಯಿಬ್ ಬಿನ್ ಉಬೈದ್ ಮತ್ತು ನುಅ್‌ಮಾನ್ ಬಿನ್ ಅಮರ್‌ರನ್ನು ಬಂಧಿಸಿದ್ದರು. ಅವರು ಹಝ್ರತ್ ಉಮರ್(ರ)ರವರ ಖಿಲಾಫತ್ ಕಾಲದಲ್ಲಿ ಜಿಸರ್ ಯುದ್ಧದಲ್ಲಿ ಶಹೀದರಾದರು. ಯುಫ್ರೆಟಿಸ್ ನದಿಯ ದಡದಲ್ಲಿ ಆ ಯುದ್ಧ ನಡೆಯಿತು. ಅವರು ಶಹೀದರಾಗುವಾಗ ಅವರ ಪ್ರಾಯ 38 ಎಂದು ಹೇಳಲಾಗುತ್ತಿದೆ.

ಅಲ್ಲಾಮ ನೂರುದ್ದೀನ್ ಹಲ್‌ಬಿಯವರ ಪ್ರಸಿದ್ಧ ಗ್ರಂಥವಾದ ಸೀರತ್ ಹಲ್‌ಬಿಯದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದ ಒಂದು ಪವಾಡವನ್ನು ಹೀಗೆ ವಿವರಿಸಲಾಗಿದೆ. ಬದರ್ ಯುದ್ಧದಲ್ಲಿ ಹಝ್ರತ್ ಸಲಿಮ ಬಿನ್ ಅಸ್‌ಲಮರ ಖಡ್ಗ ಮುರಿದು ಹೋದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖರ್ಜೂರದ ಸೋಗೆಯ ಒಂದು ತುಂಡು ಕೊಟ್ಟು ಅದನ್ನು ಬಳಸಿ ಹೋರಾಡಲು ಹೇಳಿದರು. ಹಝ್ರತ್ ಸಲಿಮರವರು ಅದನ್ನು ಕೈಯಲ್ಲಿ ಎತ್ತಿಕೊಂಡಾಗ ಅದು ಅತ್ಯುತ್ತಮ ಖಡ್ಗವಾಯಿತು. ಅನಂತರ ಅದು ಅವರ ಬಳಿ ಯಾವಾಗಲೂ ಇತ್ತು.

ಮಕ್ಕದ ಅವಿಶ್ವಾಸಿಗಳು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕೊಲ್ಲಲು ಒಂದು ಗೂಢಾಲೋಚನೆ ನಡೆಸಿದರು. ಅದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಬರೆದಿದ್ದಾರೆ: ಖಂದಕ್ ಯುದ್ಧದಲ್ಲಿ ಸೋತು ಮರಳಿದ ನಂತರ ತಮ್ಮ ಪರಾಜಯದ ಬಗ್ಗೆ ಚಿಂತಿಸುತ್ತಾ ಮಕ್ಕದ ಜನರ ನೇತಾರ ಅಬೂ ಸುಫ್‌ಯಾನ್ ಒಳಗಿಂದ ಒಳಗೆ ಉರಿಯನ್ನು ಅನುಭವಿಸುತ್ತಿದ್ದರು. ಕೊನೆಗೆ ಅವರಿಗೆ ಸಹಿಸಲಾಗದೆ ಒಂದು ದಿನ ಕೆಲವು ಖುರೈಶಿ ಯುವಕರೊಂದಿಗೆ ಹೇಳಿದರು– ನಿಮ್ಮಲ್ಲಿ ಶೂರರು ಯಾರೂ ಇಲ್ಲವೆ. ಮದೀನಕ್ಕೆ ಹೋಗಿ ರಹಸ್ಯವಾಗಿ ಮುಹಮ್ಮದನ ಹತ್ಯೆ ಮಾಡಲು ನಿಮಗೆ ಸಾಧ್ಯವಿಲ್ಲವೇ. ಮುಹಮ್ಮದ್ ಮದೀನದ ರಸ್ತೆಗಳಲ್ಲಿ ತಿರುಗಾಡುತ್ತಾ ಇರುತ್ತಾನೆಂದು ನಿಮಗೆ ತಿಳಿದಿಲ್ಲವೇ? ಆ ಯುವಕರು ಆ ಮಾತನ್ನು ಆಲಿಸಿ ಅಲ್ಲಿಂದ ನಿರ್ಗಮಿಸಿದರು.

ಕೆಲವೇ ದಿನಗಳ ನಂತರ ಒಬ್ಬ ಗ್ರಾಮೀಣ ಅರಬಿ (ಬದವೀ) ಯುವಕ ಬಂದು ಹೇಳಿದನು: ನಾನು ಈ ಕೆಲಸಕ್ಕೆ ಸಿದ್ಧನಾಗಿದ್ದೇನೆ. ನಾನು ಬಲಶಾಲಿ ಹೃದಯ ಹೊಂದಿದವನು. ದೃಢನಿರ್ಧಾರ ಮಾಡಿದವನೂ ತಕ್ಷಣ ಆಕ್ರಮಣ ಮಾಡುವವನೂ ಆಗಿರುವೆನು. ನೀವು ಸಹಾಯ ಮಾಡುವುದಾದರೆ ನಾನು ಮುಹಮ್ಮದರನ್ನು ಕೊಲ್ಲಲು ಹೋಗಲು ಸಿದ್ಧನಾಗಿದ್ದೇನೆ. ನನಗೆ ಮದೀನಕ್ಕೆ ಹೋಗುವ ಮಾರ್ಗದ ಬಗ್ಗೆ ಸಹ ಚೆನ್ನಾಗಿ ತಿಳಿದಿದೆ. ಅಬೂ ಸುಫ್ಯಾನ್ ಬಹಳ ಸಂತೋಷಗೊಂಡು ಹೇಳಿದನು: ನೀನು ನಾವು ಉದ್ದೇಶಿಸುವ ವ್ಯಕ್ತಿಯೇ ಆಗಿರುವೆ. ಅನಂತರ ಅಬೂ ಸುಫ್ಯಾನ್ ವೇಗವಾಗಿ ಸಾಗುವ ಒಂದು ಒಂಟೆಯನ್ನು ಮತ್ತು ದಾರಿ ಖರ್ಚಿಗೆ ಆವಶ್ಯಕವಾದುದನ್ನು ನೀಡಿ 'ಈ ರಹಸ್ಯ ಯಾರೊಂದಿಗೂ ಹೇಳಬಾರದು' ಎಂದು ಒತ್ತಿ ಹೇಳಿದರು.

ಆ ಗ್ರಾಮೀಣ ಅರಬಿ ಹಗಲು ಹೊತ್ತು ಅಡಗಿ ಕುಳಿತು ರಾತ್ರಿ ಪ್ರಯಾಣ ಮಾಡುತ್ತಾ ಮದೀನದ ಕಡೆಗೆ ಪ್ರಯಾಣ ಮಾಡಿದನು. ಆರನೆಯ ದಿನ ಮದೀನಕ್ಕೆ ತಲಪಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲಿದ್ದಾರೆಂದು ತಿಳಿದುಕೊಂಡು ಬನೀ ಅಬ್ದುಲ್ ಅಶಹಲ್ ಗೋತ್ರದವರ ಮಸ್‌ಜಿದ್‌ಗೆ ತಲಪಿದನು. ಆಗ ಆ ಮಸ್‌ಜಿದ್‌ನಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕುಳಿತಿದ್ದರು. ಆ ವ್ಯಕ್ತಿ ಮಸ್‌ಜಿದ್‌ಗೆ ಪ್ರವೇಶಿಸಿ ತನ್ನ ಕಡೆಗೆ ಬರುವುದನ್ನು ಕಂಡಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಆ ವ್ಯಕ್ತಿ ಯಾವುದೋ ದುರುದ್ದೇಶದಿಂದ ಬಂದಿದ್ದಾನೆ ಎಂದು. ಈ ಮಾತನ್ನು ಆಲಿಸಿ ಆ ಅರಬಿ ವೇಗವಾಗಿ ಮುಂದೆ ಬಂದಾಗ ಅನ್‌ಸಾರಿಗಳ ಒಬ್ಬ ಗಣ್ಯ ವ್ಯಕ್ತಿ ಉಸೈದ್ ಬಿನ್ ಹಝೀರ್ ತಕ್ಷಣ ಅವನ ಕಡೆಗೆ ನುಗ್ಗಿ ಅವನನ್ನು ತಬ್ಬಿಕೊಂಡು ಹಿಡಿಗೂಡಿದರು. ಅವನನ್ನು ವಶಪಡಿಸಿಕೊಂಡಾಗ ಪ್ರವಾದಿವರ್ಯರು ಅವನೊಂದಿಗೆ ಕೇಳಿದರು: ಸತ್ಯ ಹೇಳು ನೀನು ಯಾರು? ಯಾವ ಇರಾದೆಯಿಂದ ಬಂದಿರುವೆ? ಅವನು ಎಲ್ಲಾ ವಿಷಯಗಳನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿವರಿಸಿದನು. ತನಗೆ ಅಬೂ ಸುಫ್ಯಾನ್ ಇಂತಿಂತಹ ಬಹುಮಾನ ನೀಡುವುದಾಗಿ ವಾಗ್ದಾನ ಮಾಡಿರುವುದನ್ನು ಸಹ ತಿಳಿಸಿದನು. ಅನಂತರ ಆ ವ್ಯಕ್ತಿ ಕೆಲವು ದಿನ ಮದೀನದಲ್ಲಿ ವಾಸಿಸಿ ಸ್ವಂತ ಇಚ್ಛೆ ಪ್ರಕಾರ ಮುಸ್ಲಿಮನಾದನು.

ಅಬೂ ಸುಫ್ಯಾನರ ಈ ಗೂಢ ಕಾರಸ್ಥಾನದ ಕಾರಣ ಮಕ್ಕದವರ ಉದ್ದೇಶಲಕ್ಷ್ಯಗಳ ಬಗ್ಗೆ ತಿಳಿದುಕೊಳ್ಳುತ್ತಾ ಇರುವುದು ಆವಶ್ಯಕವಾಯಿತು. ಆದುದರಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಇಬ್ಬರು ಸಹಾಬಿಗಳಾದ ಅಮರ್ ಬಿನ್ ಉಮಯ್ಯ ಝುಮರೀ ಮತ್ತು ಸಲಿಮ ಬಿನ್ ಅಸ್‌ಲಮರನ್ನು ಮಕ್ಕದ ಕಡೆಗೆ ಕಳುಹಿಸಿದರು. ಅಬೂ ಸುಫ್ಯಾನರ ಗೂಢ ಕಾರಸ್ಥಾನ ಮತ್ತು ಅವರು ಹಿಂದೆ ಮಾಡಿದ ರಕ್ತಪಾತವನ್ನು ಗಮನದಲ್ಲಿರಿಸಿ ಹೇಳಿದರು: ಸಂದರ್ಭ ದೊರೆತರೆ ಇಸ್ಲಾಮಿನ ಈ ಕಠಿಣ ಶತ್ರುವನ್ನು ಹತ್ಯೆ ಮಾಡಿರಿ ಎಂದು. ಆದರೆ ಆ ಇಬ್ಬರು ಮಕ್ಕಕ್ಕೆ ತಲಪಿದಾಗ ಖುರೈಶಿಗಳು ಜಾಗರೂಕರಾದರು. ಆ ಇಬ್ಬರು ಸಹಾಬಿಗಳು ತಮ್ಮ ಜೀವ ರಕ್ಷಣೆಗೆ ಮರಳಿ ಬಂದರು. ಮಾರ್ಗಮಧ್ಯೆ ಖುರೈಶಿಗಳ ಇಬ್ಬರು ಗೂಢಚಾರರನ್ನು ಅವರು ಕಂಡರು. ಅವರನ್ನು ಮುಸ್ಲಿಮರ ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಲನವಲನಗಳನ್ನು ನಿರೀಕ್ಷಿಸಲು ಕಳುಹಿಸಲಾಗಿತ್ತು. ಅವರನ್ನು ಯಾವುದೋ ದುರುದ್ದೇಶದಿಂದ ಕಳುಹಿಸಿರಲೂಬಹುದು. ಆ ಗೂಢಚಾರರನ್ನು ಸಹಾಬಿಗಳು ಹಿಡಿಗೂಡಲು ಪ್ರಯತ್ನಿಸಿ ಅವರನ್ನು ಆಕ್ರಮಿಸಿದಾಗ ಒಬ್ಬ ಗೂಢಚರ ಕೊಲ್ಲಲ್ಪಟ್ಟು ಇನ್ನೊಬ್ಬನನ್ನು ಬಂಧಿಸಲಾಯಿತು ಮತ್ತು ಮದೀನಕ್ಕೆ ತರಲಾಯಿತು.

ಹಝ್ರತ್ ಉಮ್ಮು ಅಮ್ಮಾರ ಹೇಳುತ್ತಾರೆ: ಹುದೈಬಿಯಾ ಸಂಧಿಯ ದಿನ ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕುಳಿತಿರುವುದಾಗಿ ಕಂಡೆನು. ಆಗ ಹಝ್ರತ್ ಉಬಾದ್ ಬಿನ್ ಬಿಶರ್ ಮತ್ತು ಹಝ್ರತ್ ಸಲಿಮ ಬಿನ್ ಅಸ್‌ಲಮ್ ಕಬ್ಬಿಣದ ಕವಚ ಧರಿಸಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪಹರೆ ನೀಡುತ್ತಿದ್ದರು. ಆಗ ಖುರೈಶಿಗಳ ರಾಯಭಾರಿ ಸುಹೈಲ್ ಬಿನ್ ಅಮರ್ ಉಚ್ಛಸ್ವರದಲ್ಲಿ ಮಾತನಾಡಿದಾಗ ಆ ಇಬ್ಬರು ಸಹಾಬರು ಅವನೊಂದಿಗೆ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಧ್ವನಿಯನ್ನು ತಗ್ಗಿಸು. ಇದು ಆ ಸಂದರ್ಭದಲ್ಲಿ ಅವರು ಮಾಡಿದ ವಿಶಿಷ್ಟ ಸೇವೆಯ ಒಂದು ಪ್ರಸ್ತಾಪವಾಗಿದೆ.

ಇನ್ನೊಬ್ಬ ಸಹಾಬಿ ಹಝ್ರತ್ ಉಖ್‌ಬಾ ಬಿನ್ ಉಸ್ಮಾನ್(ರ). ಅವರು ಮತ್ತು ಅವರ ಸಹೋದರ ಹಝ್ರತ್ ಸಅದ್ ಬಿನ್ ಉಸ್ಮಾನ್ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಸಹ್ಲ್(ರ). ಅವರು ಹಝ್ರತ್ ರಾಫಿಅ್ ಬಿನ್ ಸಹ್ಲ್‌ರವರ ಸಹೋದರನಾಗಿದ್ದರು. ಅವರು ಬದರ್, ಉಹುದ್, ಮತ್ತು ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಖಂದಕ್ ಯುದ್ಧದಲ್ಲಿ ಶಹೀದರಾದರು. ಅವರು ಮದೀನದಿಂದ ಎಂಟು ಮೈಲು ದೂರವಿದ್ದ ಹಮ್‌ರಾಉಲ್ ಅಸದ್ ಎಂಬ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಭಾಗವಹಿಸಿದ ಬಗ್ಗೆ ಸುಬುಲುಲ್ ಹುದಾ ಎಂಬ ಸೀರತುನ್ನಬೀ ಗ್ರಂಥದಲ್ಲಿ ಉಲ್ಲೇಖಿತವಾಗಿದೆ. ಉಹುದ್ ಯುದ್ಧದಲ್ಲಿ ಅವರು ಮತ್ತು ಅವರ ಸಹೋದರ ತೀವ್ರವಾಗಿ ಗಾಯಗೊಂಡಿದ್ದರು. ಹಮ್‌ರಾಉಲ್ ಅಸದ್ ಯುದ್ಧದಲ್ಲಿ ಭಾಗವಹಿಸಬೇಕೆಂಬ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆ ಬಗ್ಗೆ ಇಬ್ಬರು ಸಹೋದರರು ಆಲಿಸಿದಾಗ ಒಬ್ಬ ಇನ್ನೊಬ್ಬನೊಂದಿಗೆ ಹೇಳಿದರು: ನಾವು ಈ ಯುದ್ಧದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸದಿದ್ದರೆ ಅದೊಂದು ದೌರ್ಭಾಗ್ಯವಾಗುವುದು. ಅವರು ಹೇಳಿದರು: ನಮ್ಮ ಬಳಿ ಸವಾರಿ ಮೃಗ ಸಹ ಇಲ್ಲ. ಹಝ್ರತ್ ಅಬ್ದುಲ್ಲಾ ಹೇಳಿದರು: ನಾವು ಜೊತೆ ಸೇರಿ ನಡೆದುಕೊಂಡು ಹೋಗುವ. ಹಾಗೆ ಅವರಿಬ್ಬರೂ ಬೀಳುತ್ತಾ ಏಳುತ್ತಾ

ಮುಂದೆ ಸಾಗಿದರು. ಆಗ ಹಝ್ರತ್ ರಾಫಿಅ್ ಬಹಳ ಬಲಹೀನತೆ ಅನುಭವಿಸಿದರು. ಆಗ ಹಝ್ರತ್ ಅಬ್ದುಲ್ಲಾರವರು ರಾಫಿಅ್‌ರನ್ನು ತನ್ನ ಬೆನ್ನ ಮೇಲೆ ಎತ್ತಿಕೊಂಡು ನಡೆದರು. ಇಶಾ ಸಮಯ ಅವರಿಬ್ಬರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ತಲಪಿದರು. ಆ ರಾತ್ರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಹರೆಗಾರನಾಗಿ ಹಝ್ರತ್ ಉಬಾದ್ ಬಿನ್ ಬಿಶರ್ ನೇಮಿಸಲ್ಪಟ್ಟಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಇಬ್ಬರು ಸಹಾಬರೊಂದಿಗೆ ಕೇಳಿದರು: ನೀವು ತಡವಾಗಿ ಬರಲು ಕಾರಣವೇನು? ಆಗ ಅವರಿಬ್ಬರು ಅದರ ಕಾರಣ ಹೇಳಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಶುಭವನ್ನು ಕೋರುತ್ತಾ ಪ್ರಾರ್ಥಿಸಿ ಹೇಳಿದರು: ನಿಮಗೆ ದೀರ್ಘಾಯುಸ್ಸು ಲಭಿಸಿದರೆ ನೀವು ಕಾಣುವಿರಿ – ನಿಮಗೆ ಸವಾರಿ ಮಾಡಲು ಕುದುರೆಗಳು, ಹೇಸರ ಕತ್ತೆಗಳು ಮತ್ತು ಒಂಟೆಗಳು ದೊರಕುವುವು. ಆದರೆ ನೀವು ಈಗ ಮಾಡಿದ ಪ್ರಯಾಣಕ್ಕಿಂತ ಅದು ಉತ್ತಮವಾಗಲಾರದು. ನೀವು ಕಾಲುನಡಿಗೆಯಾಗಿ ಬೀಳುತ್ತಾ ಏಳುತ್ತಾ ಮಾಡಿದ ಪ್ರಯಾಣದ ಅನುಗ್ರಹ ಮತ್ತು ಪ್ರತಿಫಲ ಬಹಳ ಹೆಚ್ಚಾಗಿರುವುದು.

ಹಮ್‌ರಾಉಲ್ ಅಸದ್ ಯುದ್ಧದ ಬಗ್ಗೆ ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಉಹುದ್ ಯುದ್ಧದ ನಂತರದ ರಾತ್ರಿ ಮದೀನದಲ್ಲಿ ಬಹಳ ಭಯಭೀತಿಯ ರಾತ್ರಿಯಾಗಿತ್ತು. ಖುರೈಶಿಗಳ ಸೈನ್ಯ ಮಕ್ಕದ ಕಡೆಗೆ ಮರಳಿದ್ದರೂ ಅವರು ಹಾಗೆ ಮಾಡಿದುದು ಮುಸ್ಲಿಮರನ್ನು ಶತ್ರುಗಳ ಆಕ್ರಮಣದ ಬಗ್ಗೆ ನಿರ್ಲಕ್ಷ್ಯತೆಯಿಂದ ಇರಲು ಆಗಿರಬಹುದೇ ಎಂಬ ಸಂಶಯವಿತ್ತು. ಆದುದರಿಂದ ರಾತ್ರೀ ಇಡೀ ಮದೀನದಲ್ಲಿ ಪಹರೆ ನೀಡಲು ವ್ಯವಸ್ಥೆ ಮಾಡಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿವಾಸಕ್ಕೆ ಸಹಾಬರು ಬಹಳ ಶ್ರದ್ಧೆವಹಿಸಿ ಪಹರೆ ನೀಡಿದರು. ಅದು ಕೇವಲ ಊಹೆಯಾಗಿರಲಿಲ್ಲವೆಂದು ನಂತರ ತಿಳಿದುಬಂತು. ಸುಬ್‌ಹ್ ನಮಾಝ್‌ಗೆ ಮೊದಲು ಹೀಗೆ ತಿಳಿಯಿತು – ಖುರೈಶಿಗಳ ಸೈನ್ಯ ಮದೀನದಿಂದ ಕೆಲವು ಮೈಲುಗಳಷ್ಟು ದೂರ ಶಿಬಿರ ಹೂಡಿದೆ ಎಂದು. ಅಲ್ಲಿ ಮಕ್ಕದ ಗಣ್ಯರು ಚರ್ಚಿಸುತ್ತಿದ್ದರು. ಉಹುದ್ ಯುದ್ಧದಲ್ಲಿ ಜಯಗಳಿಸಿದ ಕಾರಣ ಈಗ ಮದೀನವನ್ನು ಏಕೆ ಆಕ್ರಮಿಸಬಾರದು ಎಂದು ಚರ್ಚಿಸುತ್ತಿದ್ದರು. ಕೆಲವರು ಹೀಗೆ ಹೇಳಿದರು: ಉಹುದ್‌ನಲ್ಲಿ ಜಯ ಲಭಿಸಿದುದು ಭಾಗ್ಯವೆಂದು ಗಣಿಸಿ ಮಕ್ಕಕ್ಕೆ ಮರಳುವ. ನಮ್ಮ ಜಯ ಅಪಜಯವಾಗಿ ಕೊನೆಗೊಳ್ಳದಿರಲಿ. ಏಕೆಂದರೆ ಈಗ ಮದೀನವನ್ನು ಆಕ್ರಮಿಸಿದರೆ ಮುಸ್ಲಿಮರು ಜೀವವನ್ನು ಪಣವಿಟ್ಟು ಹೋರಾಡುವರು. ಉಹುದ್ ಯುದ್ಧದಲ್ಲಿ ಭಾಗವಹಿಸದವರು ಸಹ ಯುದ್ಧ ಕ್ಷೇತ್ರಕ್ಕೆ ಬರುವರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ವಿಷಯ ತಿಳಿದಾಗ ಅವರು ಮುಸ್ಲಿಮರೊಂದಿಗೆ ಯುದ್ಧಕ್ಕೆ ಹೊರಡಲು ಆಜ್ಞಾಪಿಸಿದರು. ಆದರೆ ಉಹುದ್‌ನಲ್ಲಿ ಭಾಗವಹಿಸಿದವರ ಹೊರತು ಬೇರೆ ಯಾರೂ ನಮ್ಮ ಜೊತೆ ಹೊರಡಬಾರದು ಎಂದು ಸಹ ಹೇಳಿದರು. ಮದೀನದಿಂದ ಎಂಟು ಮೈಲು ದೂರವಿರುವ ಹಮ್‌ರಾಉಲ್ ಅಸದ್‌ಗೆ ತಲಪಿದಾಗ ಅಲ್ಲಿ ಇಬ್ಬರು ಮುಸ್ಲಿಮರ ಮೃತಶರೀರಗಳು ಅವರಿಗೆ ಕಾಣಿಸಿದುವು. ಆ ಎರಡು ಮೃತ ಶರೀರಗಳನ್ನು ಒಂದು ಗೋರಿಯಲ್ಲಿ ದಫನ್ ಮಾಡಲಾಯಿತು. ಅಲ್ಲಿ ಶಿಬಿರ ಹೂಡಿ ರಾತ್ರಿ ಮೈದಾನದ ವಿವಿಧ ಸ್ಥಳಗಳಲ್ಲಿ ಬೆಂಕಿ ಹೊತ್ತಿಸಲು ಹೇಳಿದರು. ಅಲ್ಲಿ ಐನೂರು ಬೆಂಕಿ ಉರಿಯುವುದು ಕಾಣಿಸಿತು. ಅವುಗಳನ್ನು ನೋಡಿದಾಗ ಭಯ ಹುಟ್ಟಿಸುವ ಹಾಗೆ ಇತ್ತು. ಅಲ್ಲಿಗೆ ಖುಝಾಅ ಗೋತ್ರದ ಒಬ್ಬ ಬಹುದೇವಾರಾಧಕನಾದ ಮುಖಂಡ ಮಅಬದ್ ಎಂಬವನು ಬಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಂಡು ಉಹುದ್ ಯುದ್ಧದಲ್ಲಿ ಶಹೀದರಾದವರ ಬಗ್ಗೆ ಸಂತಾಪ ಸೂಚಿಸಿ ಮುಂದೆ ಹೋದನು. ಮರುದಿನ ರೂಹ ಎಂಬಲ್ಲಿ – ಅದು ಮದೀನದಿಂದ 40 ಮೈಲು ದೂರದಲ್ಲಿದೆ – ಖುರೈಶಿಗಳ ಸೈನ್ಯ ಶಿಬಿರ ಹೂಡಿದುದನ್ನು ಕಂಡನು. ಮದೀನದ ಕಡೆಗೆ ಸೈನ್ಯ ಸಾಗುವ ಸಿದ್ಧತೆ ನಡೆಸುತ್ತಿತ್ತು. ಮಅಬದ್ ಅಬೂ ಸುಫ್‌ಯಾನ್ ಬಳಿಗೆ ಹೋಗಿ ಹೇಳಿದನು: ನೀವು ಇದೇನು ಮಾಡುತ್ತಿರುವಿರಿ. ಅಲ್ಲಾಹನಾಣೆ ನಾನು ಮುಹಮ್ಮದರ ಸೈನ್ಯವನ್ನು ಹಮ್‌ರಾಉಲ್ ಅಸದ್‌ನಲ್ಲಿ ಕಂಡು ಬಂದಿದ್ದೇನೆ. ಅದು ಅತ್ಯಂತ ಭಯಾನಕ ಸೈನ್ಯ. ಎಂದರೆ ಅಂತಹ ಸೈನ್ಯವನ್ನು ಎಂದೂ ನಾನು ಕಂಡಿಲ್ಲ. ಉಹುದ್ ಯುದ್ಧದ ಸೋಲು ಅವರನ್ನು ಎಷ್ಟು ಉತ್ತೇಜಿಸಿದೆ ಎಂದರೆ ನಿಮ್ಮನ್ನು ನೋಡಿದ ಕೂಡಲೇ ಅವರು ನಿಮ್ಮನ್ನು ಭಸ್ಮೀಕರಿಸುವರು. ಅಬೂ ಸುಫ್‌ಯಾನ್ ಮತ್ತು ಸಂಗಡಿಗರ ಮೇಲೆ ಮಅಬದ್‌ನ ಈ ಮಾತುಗಳು ಬಹಳ ಪ್ರಭಾವ ಬೀರಿತು. ಅವರು ಮದೀನಕ್ಕೆ ಹೋಗುವುದಕ್ಕೆ ಬದಲಾಗಿ ಮಕ್ಕದ ಕಡೆಗೆ ಪ್ರಯಾಣಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ವಿಷಯ ತಿಳಿದಾಗ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಹೇಳಿದರು: ಅಲ್ಲಾಹನು ಅವಿಶ್ವಾಸಿಗಳ ಹೃದಯಗಳ ಮೇಲೆ ಭಯವನ್ನು ಆವರಿಸುವಂತೆ ಮಾಡಿದುದರಿಂದ ಹೀಗೆ ಸಂಭವಿಸಿದೆ.

ಇನ್ನೊಬ್ಬ ಸಹಾಬಿ ಹಝ್ರತ್ ಉತ್‌ಬ ಬಿನ್ ರಬೀಅ(ರ). ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಅಲ್ಲಾಮ ಇಬ್ನು ಹಜರ್ ಅಸ್‌ಖಲಾನಿ ಹೇಳುತ್ತಾರೆ: ಯರ್‌ಮೂಕ್ ಯುದ್ಧದಲ್ಲಿ ಭಾಗವಹಿಸಿದ ಗಣ್ಯರಲ್ಲಿ ಒಬ್ಬರು ಉತ್‌ಬ ಬಿನ್ ರಬೀಅ ಆಗಿದ್ದರು. ಯರ್‌ಮೂಕ್ ಯುದ್ಧವು ಹಿಜರಿ 12–13ನೇ ವರ್ಷದಲ್ಲಿ ಹಝ್ರತ್ ಅಬೂಬಕರ್‌ರವರ ಖಿಲಾಫತ್ ಕಾಲದಲ್ಲಿ ಖಾಲಿದ್ ಬಿನ್ ವಲೀದರ ನೇತೃತ್ವದಲ್ಲಿ ರೂಮೀ ಜನರ ವಿರುದ್ಧ ಮಾಡಲಾದ ಯುದ್ಧವಾಗಿತ್ತು. ರೂಮೀ ಸೈನ್ಯದ ಸಂಖ್ಯೆ ಎರಡು – ಎರಡೂವರೆ ಲಕ್ಷದಷ್ಟಿತ್ತು ಎಂದು ಹೇಳಲಾಗುತ್ತಿದೆ. ಮುಸ್ಲಿಮ್ ಸೈನಿಕರ ಸಂಖ್ಯೆ 37ರಿಂದ 46 ಸಾವಿರದ ಮಧ್ಯೆ ಇತ್ತು. ಈ ಸೈನ್ಯದಲ್ಲಿದ್ದ ಒಂದು ಸಾವಿರದಷ್ಟು ಹಿರಿಯರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖದರ್ಶನ ಮಾಡಿದವರಾಗಿದ್ದರು. ಬದರ್ ಯುದ್ಧದಲ್ಲಿ ಭಾಗವಹಿಸಿದವರು ಸಹ

ಅವರೊಂದಿಗಿದ್ದರು. ಆ ಯುದ್ಧದಲ್ಲಿ ಬಹಳ ರಕ್ತಪಾತವಾಯಿತು. ಅದೇ ಕಾಲದಲ್ಲಿ ಮದೀನದಲ್ಲಿ ಹಝ್ರತ್ ಅಬೂಬಕರ್(ರ) ನಿಧನ ಹೊಂದಿದರು. ಆದರೆ ಆ ವಾರ್ತೆ ಸೈನ್ಯದಲ್ಲಿ ಹಬ್ಬದಂತೆ ಹಝ್ರತ್ ಖಾಲಿದ್ ಬಿನ್ ವಲೀದ್ ನಿಗಾವಹಿಸಿದರು. ಮುಸ್ಲಿಮರು ಸ್ಥಿರಚಿತ್ತರಾಗಿ ಹೋರಾಡಿದರು. ಸಿರಿಯಾ ತನಕ ಯುದ್ಧ ವ್ಯಾಪಿಸಿತು. ರೂಮೀ ಸೈನ್ಯ ಸೋತು ಓಡಿ ಹೋಯಿತು. ಈ ಯುದ್ಧದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ರೂಮೀ ಸೈನಿಕರು ಕೊಲ್ಲಲ್ಪಟ್ಟರು. ಮೂರುಸಾವಿರ ಮುಸ್ಲಿಮರು ಈ ಯುದ್ಧದಲ್ಲಿ ಶಹೀದರಾದರು. ಶಹೀದರಾದವರಲ್ಲಿ ಹಝ್ರತ್ ಇಕ್ರಿಮ ಬಿನ್ ಅಬೂಜಹಲ್ ಸಹ ಇದ್ದರು. ಯರ್ಮೂಕ್ ವಿಜಯದ ನಂತರ ಇಸ್ಲಾಮೀ ಸೈನ್ಯ ಇಡೀ ಸಿರಿಯಾ ದೇಶದಲ್ಲಿ ಹರಡಿತು. ಕನ್ ಸರೀನ್, ಅಂತಾಕ್ಯ, ಜೂಮಾ, ಸರ್ಮೀನ್, ತೇಝೀನ್, ಕೋರಸ್, ತಲ್‌ಅಝಾಝ್, ಝುಲೂಕ್, ರುಬಾನ್ ಮೊದಲಾದ ಸ್ಥಳಗಳನ್ನು ಇಸ್ಲಾಮೀ ಸೇನೆ ಅತ್ಯಂತ ಸುಲಭವಾಗಿ ಜಯಿಸಿತು.

ನಾನು ಒಬ್ಬ ಮೃತರ ಬಗ್ಗೆ ಪ್ರಸ್ತಾಪಿಸುವೆನು. ಮುಕರ್ರಮ ಸಾಹಿಬ್ ಝಾದಿ ಸಬೀಹ ಬೇಗಮ್ ಸಾಹಿಬ. ಅವರು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರ ಎಲ್ಲರಿಗಿಂತ ದೊಡ್ಡ ಪುತ್ರಿ ಮುಕರ್ರಮ ಅಮತುಸ್ಸಲಾಮ್ ಸಾಹಿಬ ಮತ್ತು ಹಝ್ರತ್ ಮಿರ್ಝಾ ರಶೀದ್ ಅಹ್ಮದ್ ಸಾಹಿಬರ ಹಿರಿಯ ಪುತ್ರಿ ಆಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಉಮ್ಮು ನಾಸಿರ್ ರಝಿಯಲ್ಲಾಹು ಅನ್‌ಹಾರವರ ಪುತ್ರ ಸಾಹಿಬ್ ಝಾದ ಮಿರ್ಝಾ ಅನ್‌ವರ್ ಅಹ್ಮದರ ಪತ್ನಿಯಾಗಿದ್ದರು. ಅವರು 90ನೇ ವಯಸ್ಸಿನಲ್ಲಿ ಎಪ್ರಿಲ್ 30ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ನನ್ನ ಸೋದರತ್ತೆ ಸಹ ಆಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹುರವರ ಪತ್ನಿ ಹಝ್ರತ್ ಸಯ್ಯಿದ ಆಸಿಫ ಬೇಗಮರ ಹಿರಿಯಕ್ಕ ಅವರಾಗಿದ್ದರು. ಅವರ ಪುತ್ರ ಬರೆಯುತ್ತಾರೆ: ನನ್ನ ತಾಯಿ ಅತ್ಯಂತ ಸರಳ ಸ್ವಭಾವಿಯೂ ಬಡವರ ಬಗ್ಗೆ ಕಾಳಜಿವುಳ್ಳವರೂ, ಅವರ ಸುಖದುಃಖಗಳಲ್ಲಿ ಸಹಾಯ ಮಾಡುವವರೂ ಆವಶ್ಯಕತೆಯುಳ್ಳವರಿಗೆ ಸಹಾಯ ಮಾಡುವವರೂ ಆಗಿದ್ದರು. ಅವರು ತನ್ನ ಸೇವಕರೊಂದಿಗೆ ಬಹಳ ಚೆನ್ನಾಗಿ ವರ್ತಿಸುವವರಾಗಿದ್ದರು. ಅವರಿಗೆ ಮೂವರು ಪುತ್ರಿಯರೂ ಒಬ್ಬ ಪುತ್ರನೂ ಇದ್ದಾರೆ. ಅವರ ಮಕ್ಕಳು ತಮ್ಮ ತಾಯಿಯ ಒಳಿತುಗಳನ್ನು ಮೈಗೂಡಿಸಲು ಅಲ್ಲಾಹನು ಭಾಗ್ಯ ನೀಡಲಿ. ಪರಸ್ಪರ ಪ್ರೀತಿಯಿಂದ ಜೀವಿಸಲು ಹಾಗೂ ಯಾವಾಗಲೂ ಖಿಲಾಫತ್‌ನೊಂದಿಗೆ ಜೋಡಿಸಿ ಜೀವಿಸುವ ಭಾಗ್ಯ ದೊರಕಲಿ – ಆಮೀನ್.

—————*****—————


***Friday Sermon delivered by Hadrath Khaleefatul Masih Al Khamis****(atba)*

*At,Masjid Baithul Futhuh London, UK. On 03-05-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email****: khutuba.kannada@gmail.com*



**You can find all the Sermons archived at**: www.alislam.org/friday-sermon